# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 6672 /2021

**ಚಾಸಾ ಃ- 05 / ಪ್ರಾಸಾ ಃ- 06**

| | |
|---|---|
| ಹೆಸರು | ರಾಮಪ್ಪ ಪಿ |
| ತಂದೆ ಹೆಸರು | ಪರಮೇಶ್ವರಪ್ಪ |
| ವಯಸ್ಸು | 34 |
| ಉದ್ಯೋಗ | ಶಿಕ್ಷಕರು |
| ವಿಳಾಸ | ಚಿಕ್ಕನಾಯಕನಹಳ್ಳಿ |

**ದಿನಾಂಕಃ 06.09.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

25.11.2019 ರಿಂದ 09.11.2023 ರವರಿಗೆ ಅಬಕಾರಿ ಪೇದೆ ಎಂದು ಮಾಗಡಿ ವಲಯದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 26.12.2020 ರಂದು ಗ್ರಾಮಪಂಚಾಯ್ತಿ ಚುನಾವಣೆಯ ಪ್ರಯುಕ್ತ Dry day ಎಂದು ಘೋಷಿಸಿದ್ದ ಕಾರಣ ಮಾಗಡಿ ವಲಯದ ಆಗಲಕೋಟೆಹ್ಯಾಂಡ್ ಪೋಸ್ಟ್ ವ್ಯಾಪ್ತಿಯಲ್ಲಿ ಚಾಸಾ 1ರವರು ಹಾಗೂ ಸಿಬ್ಬಂದಿಗಳಾದ ನಾನು ಮತ್ತು ಮಾಗಡಿ ವಲಯದ ಸಿಬ್ಬಂದಿಗಳಾದ ನಾನು ಮತ್ತು ಚಾಸಾ-4 ಮತ್ತು ಚಾಸಾ 6 ರವರು ಚಾಸಾ 1 ರವರ ಜೊತೆಯಲ್ಲಿ ಸರ್ಕಾರಿ ವಾಹನ ಸಂಖ್ಯೆ ಕೆಎ 01-ಜಿ-5794 ರಲ್ಲಿ ಗಸ್ತು ನಡೆಸುತ್ತಿರುವಾಗ ಚಾಸಾ 1 ರವರಿಗೆ ಮಾಹಿತಿ ಬಂದ ಮೇರೆಗೆ ಆಗಲಕೋಟೆ ಹ್ಯಾಂಡ್ ಪೋಸ್ಟ್ ಬಳಿ ಇರುವ ಶಿವಾಜಿ ಮಿಲಿಟರಿ ಹೋಟೆಲ್ ನಲ್ಲಿ ಮದ್ಯವನ್ನು ಶೇಖರಣೆ ಮಾಡಿ ಗ್ರಾಹಕರಿಗೆ ಮಾರಾಟ ಮಾಡುತ್ತಿರುವ ಮಾಹಿತಿ ಬಂದಿತ್ತು. ನಂತರ ನಾವುಗಳು ಸದರಿ ಸ್ಥಳಕ್ಕೆ ತೆರಳಿ ಪಂಚರಾದ ಚಾಸಾ-2 ಮತ್ತು 3 ರವರಿಗೆ ನೋಟೀಸನ್ನು ಜಾರಿ ಮಾಡಿ ಬಂದ ವಿಷಯವನ್ನು ತಿಳಿಸಿ ನಮಗೆ ಪಂಚರಾಗಿ ಸಹಕರಿಸಬೇಕೆಂದು ಕೇಳಲಾಗಿ ಸದರಿ ಚಾಸಾ-2 ಮತ್ತು 3 ರವರು ಪಂಚರಾಗಿ ಬರಲು ಒಪ್ಪಿಕೊಂಡಿದ್ದರು. ನಂತರ ಶಿವಾಜಿ ಮಿಲಿಟರಿ ಹೋಟೆಲ್ ಗೆ ತೆರಳಿ ನಮ್ಮ ಹಾಗೂ ಪಂಚರ ಅಂಗಶೋಧನೆ

ಮಾಡಿಕೊಂಡು ಹೊಟೆಲ್ ಒಳಗೆ ಪ್ರವೇಶಿಸಿದಾಗ ಶಿವಾಜಿ ಹೋಟೆಲ್ ಪಶ್ಚಿಮಾಭಿಮುಖವಾಗಿ ಇರುತ್ತದೆ. ಹೊಟೆಲ್ ನ ಕ್ಯಾಶ್ ಕೌಂಟರ್ ನಲ್ಲಿ ಒಬ್ಬ ಆಸಮಿ ಕುಳಿತಿದ್ದು ಆತನನ್ನು ವಿಚಾರಿಸಲಾಗಿ ತನ್ನ ಹೆಸರು ಜನಾರ್ಧನ ರಾವ್ ಬಿನ್ ಬಾಬುರಾವ್ ಎಂದು ತಿಳಿಸಿರುತ್ತಾನೆ. ನಂತರ ಆತನಿಗೆ ಬಂದ ಮಾಹಿತಿಯನ್ನು ತಿಳಿಸಿದಾಗ ಆತನು ವಿಚಲಿತಗೊಂಡಿರುತ್ತಾನೆ. ನಂತರ ಸಮಯದ ಕಾಲಾವಕಾಶ ಇಲ್ಲದ ಕಾರಣ ಅಬಕಾರಿ ಕಾಯ್ದೆ ಕಲಂ 54ರ ಅಡಿಯಲ್ಲಿ ಶೋಧನಾ ಸಮುಚಿತ ವಾರೆಂಟ್ ಅನ್ನು ತಯಾರಿಸಿ ಪಂಚರ ಸಹಿಯನ್ನು ಪಡೆದುಕೊಂಡಿರುತ್ತೇವೆ. ಹೋಟೆಲ್ ನಲ್ಲಿ ಒಂದು ಡೈನಿಂಗ್ ಹಾಲ್ ಮತ್ತು ಅಡುಗೆ ಕೋಣೆ ಇರುತ್ತವೆ. ಹೋಟೆಲ್ ಹಿಂಭಾಗದಲ್ಲಿ ಒಂದು ಕೊಠಡಿ ಇದ್ದು ಕೊಠಡಿಯಲ್ಲಿ ಒಂದು ವಾಟರ್ ನ ಸಂಪ್ ಇರುತ್ತದೆ. ಅದನ್ನು ತೆಗೆದು ನೋಡಿದಾಗ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಇದ್ದದ್ದು ಕಂಡುಬಂದಿರುತ್ತದೆ. ಸದರಿ ಚೀಲವನ್ನು ಪಂಚರ ಸಮಕ್ಷಮ ತೆಗೆದು ನೋಡಲಾಗಿ ವಿವಿಧ ಮಾದರಿಯ ಮದ್ಯದ ಟೆಟ್ರಾ ಪ್ಯಾಕುಗಳು ಇರುವುದು ಕಂಡುಬಂದಿರುತ್ತದೆ. ಅದನ್ನು ಪರಿಶೀಲಿಸಿ ನೋಡಲಾಗಿ 180 ಎಂ ಎಲ್ ನ 17 ಬ್ಯಾಗ್ ಪೆಪರ್ ವಿಸ್ಕಿಯ ಟೆಟ್ರಾ ಪ್ಯಾಕಗಳು, 180 ಎಂ ಎಲ್ ನ 21 ಓಲ್ಡ್ ಟಾವರಿನ್ ವಿಸ್ಕಿಯ ಟೆಟ್ರಾ ಪ್ಯಾಕುಗಳು ಮತ್ತು 90 ಎಂ ಎಲ್ ನ 17 ಓಸಿ ವಿಸ್ಕಿಯ ಟೆಟ್ರಾ ಪಾಕುಗಳು ಹೀಗೆ ಒಟ್ಟು 8.370 ಲೀಟರ್ ಮದ್ಯ ಇರುವುದು ಕಂಡು ಬಂದಿರುತ್ತದೆ. ಸದರಿ ಮದ್ಯದ ಟೆಟ್ರಾ ಪ್ಯಾಕಗಳನ್ನು ಹೊಂದಲು ಪರವಾನಗಿ ಇದೆಯೆ ಎಂದು ಸದರಿ ವ್ಯಕ್ತಿಗೆ ಕೇಳಲಾಗಿ ಆತನು ಯಾವುದೇ ಪರವಾನಗಿ ಇರುವುದಿಲ್ಲವೆಂದು ತಿಳಿಸಿರುತ್ತಾನೆ. ಇದು ಒಬ್ಬ ವ್ಯಕ್ತಿಯು ಗರಿಷ್ಟ ಮಟ್ಟಕ್ಕಿಂತ ಜಾಸ್ತಿ ಪರವಾನಗಿ ಇಲ್ಲದೆ ಇಟ್ಟಿರುವುದು ಅಬಕಾರಿ ಕಾಯ್ದೆಯ ಪ್ರಕಾರ ಅಪರಾಧವೆಂದು ತಿಳಿಸಿರುತ್ತೇವೆ. ಸದರಿ ಮದ್ಯಗಳನ್ನು ಯಾವ ಕಾರಣಕ್ಕಾಗಿ ಇಟ್ಟುಕೊಂಡಿರುತ್ತೀರಿ ಎಂದು ಕೇಳಲಾಗಿ ಆತನು ಹೆಚ್ಚಿನ ಹಣವನ್ನು ಗಳಿಸುವ ಉದ್ದೇಶಕ್ಕಾಗಿ ಇಟ್ಟುಕೊಂಡಿರುತ್ತೇನೆ ಎಂದು ತಿಳಿಸಿರುತ್ತಾನೆ. ನಂತರ ಜಪ್ತು ಪಡಿಸಿದ ಮದ್ಯಗಳಿಂದ ತಲಾ 10 ಟೆಟ್ರಾ ಪ್ಯಾಕುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆಯಲಾಯಿತು. ಅದನ್ನು ಬಿಳಿಯ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ 21ಬಿ ಎಂಬ ಅಬಕಾರಿ ಸೀಲ್ ನಿಂದ ಮೊಹರು ಮಾಡಲಾಯಿತು. ನಂತರ ಮಾದರಿ

ಚೀಟಿಯನ್ನು ತಯಾರಿಸಿ ಅದಕ್ಕೆ ಅಂಟಿಸಲಾಯಿತು. ನಂತರ ಮಾದರಿ ಸೀಲಿನ ನಕಲನ್ನು ತಯಾರಿಸಿ ಪಂಚರ ಸಹಿ ಪಡೆಯಲಾಯಿತು. ನಂತರ ಆರೋಪಿಯನ್ನು ಸ್ಥಳದಲ್ಲಿ ದಸ್ತಗಿರಿ ಮಾಡಿ ಕಛೇರಿಗೆ ತರಲಾಯಿತು. ನಂತರ ಮುದ್ದೆಮಾಲು ಹಾಗೂ ಆರೋಪಿಯನ್ನು ಅಬಕಾರಿ ಕಛೇರಿಗೆ ತೆರಳಿ ಮೊಕದ್ದಮೆ ದಾಖಲಿಸಲಾಗಿ ಪಂಚರಿಗೆ ತಿಳಿಸಲಾಯಿತು. ಮಹಜರ್ ಕ್ರಮವನ್ನು ಮಧ್ಯಾಹ್ನ 1.00 ರಿಂದ 2.30 ಗಂಟೆವರೆಗೆ ಜರುಗಿಸಲಾಯಿತು.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ಹಂತದಲ್ಲಿ ಆರೋಪಿ ಪರ ವಕೀಲರಿಂದ ಆರೋಪಿಯ ಗುರುತಿಸುವಿಕೆಗೆ ಯಾವುದೇ ತಕರಾರು ಇರುವುದಿಲ್ಲ.

ಈಗ ಸಾಕ್ಷಿಗೆ ನಿಪಿ-01 ನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-1(ಎಫ್) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ಮಹಜರ್ ಗೆ ನನ್ನ ಜೊತೆ ಚಾಸಾ 1 ರಿಂದ 4, ಮತ್ತು 6 ರವರು ಸಹಿ ಮಾಡಿರುತ್ತಾರೆ.

ಈಗ ಸಾಕ್ಷಿಗೆ ಮುದ್ದೆಮಾಲು 1 ರಿಂದ 3 ಅನ್ನು ತೋರಿಸಲಾಗಿ ಸದರಿ ಜಪ್ತಿ ಪಡಿಸಿಕೊಂಡ ಟೆಟ್ರಾ ಪ್ಯಾಕುಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲು ಃ ಆರೋಪಿ ಪರ ಶ್ರೀ ಆರ್ ಎಸ್ ವಕೀಲರಿಂದಃ**

ಶಿವಾಜಿ ಮಿಲ್ಟ್ರಿ ಹೋಟೆಲ್ ಯಾರ ಮಾಲೀಕತ್ವಕ್ಕೆ ಸೇರಿರುತ್ತದೆ ಎಂದು ನೀವು ದಾಖಲೆ ನೋಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಸದರಿ ಹೋಟೆಲ್ ಗೆ ದಾಳಿ ಮಾಡಿದಾಗ ಯಾರಾದರೂ ಗ್ರಾಹಕರು ಹೋಟೆಲ್ ನಲ್ಲಿ ಮದ್ಯ ಸೇವನೆ ಮಾಡುತ್ತಿದ್ದರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪಂಚದಾರರಿಗೆ ನೋಟೀಸನ್ನು ಎಲ್ಲಿ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಹೋಟೆಲ್ ಮುಂಭಾಗದಲ್ಲಿ ಎಂದು ನುಡಿಯುತ್ತಾರೆ. ಆರೋಪಿ ಹಾಗೂ ಸದರಿ ಶಿವಾಜಿ ಮಿಲ್ಟ್ರಿ ಹೋಟೆಲ್ ನ ಮಾಲೀಕರಿಗೆ ಏನು ಸಂಬಂಧ ಎಂದು ನೀವು ದಾಖಲೆ ಪರಿಶೀಲಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಹಜರ್ ನಲ್ಲಿ ಹೋಟೆಲ್ ನಂಬರ್, ವಿಸ್ತೀರ್ಣ ಮತ್ತು ಕೋಣೆಗಳ ಬಗ್ಗೆ ಬರೆದಿರುತ್ತೀರಾ ಎಂದರೆ ಸಾಕ್ಷಿ ಕೋಣೆಗಳ ಬಗ್ಗೆ ಬರೆದಿದ್ದು ವಿಸ್ತೀರ್ಣ

ಬರೆದಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ನಿಮ್ಮ ಸಮಕ್ಷಮ ಅಮಾನತು ಪಡಿಸಿಕೊಂಡಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಪ್ಲಾಸ್ಟಿಕ್ ಚೀಲ ನ್ಯಾಯಾಲಯದ ಮುಂದೆ ಇದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಜಪ್ತಿ ಪಡಿಸಿಕೊಂಡ ಮದ್ಯದ ಟೆಟ್ರಾ ಪ್ಯಾಕುಗಳನ್ನು ಎಲ್ಲಿಂದ ತಂದಿರುತ್ತಾರೆ ಎಂದು ಬರವಣಿಗೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಟೆಟ್ರಾ ಪ್ಯಾಕುಗಳ ಬ್ಯಾಚ್ ನಂಬರ್ ಮತ್ತು ಟೆಟ್ರಾ ಪ್ಯಾಕುಗಳ ಮೇಲೆ ಇರುವ ಇತರ ವಿವರಗಳನ್ನು ಮಹಜರ್ ನಲ್ಲಿ ನಮೂದಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಲೇಬಲ್ ನಂಬರ್ ಅನ್ನು ನಾಶಪಡಿಸಿರುತ್ತಾರೆ ಎಂದು ಮಹಜರ್ ನಲ್ಲಿ ನಮೂದಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಗ್ರಾಮಪಂಚಾಯ್ತಿ ಚುನಾವಣೆ ಇದ್ದಿದ್ದರಿಂದ ನಿಮ್ಮ ಇಲಾಖೆಯ ಅಂಕಿಅಂಶಕ್ಕೋಸ್ಕರ ನೀವು ಯಾವುದೇ ದಾಳಿಯನ್ನು ಮಾಡದೆ ಹಾಗೂ ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಳ್ಳದೆ ಠಾಣೆಯಲ್ಲೆ ಎಲ್ಲಾ ಸೃಷ್ಟಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಶಿವಾಜಿ ಹೋಟೆಲ್ ಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಹಾಗೂ ಆರೋಪಿಯು ಸದರಿ ಹೋಟೆಲ್ ನಲ್ಲಿ ಇದ್ದಿರಲಿಲ್ಲ ಎಂದರೆ ಸಾಕ್ಷಿ ಇದ್ದರು ಎಂದು ನುಡಿಯುತ್ತಾರೆ. ಸದರಿ ಹೋಟೆಲ್ ನ ಅಕ್ಕ ಪಕ್ಕ ಮನೆಗಳು ಮತ್ತು ಅಂಗಡಿಗಳು ಇವೆಯೆ ಎಂದರೆ ಸಾಕ್ಷಿ ಇದೆ ಎಂದು ನುಡಿಯುತ್ತಾರೆ. ನೀವು ದಾಳಿ ಮಾಡಿದ ಸಮಯದಲ್ಲಿ ಅಂಗಡಿಗಳು ಓಪನ್ ಇತ್ತೆ ಎಂದರೆ ಸಾಕ್ಷಿ ಓಪನ್ ಇತ್ತು ಎಂದು ನುಡಿಯುತ್ತಾರೆ. ಸದರಿ ಅಕ್ಕಪಕ್ಕ ಅಂಗಡಿಯವರನ್ನು ಮಹಜರ್ ಮಾಡುವ ಸಮಯದಲ್ಲಿ ಕರೆದಿದ್ದಿರ ಎಂದರೆ ಸಾಕ್ಷಿ ಕರೆದಿದ್ದೆವು ಎಂದು ನುಡಿಯುತ್ತಾರೆ. ನೀವು ಯಾವುದೇ ದಾಳಿ ಮಾಡಿರುವುದಿಲ್ಲ ಹಾಗೂ ಯಾವುದೇ ಅಬಕಾರಿ ಸೀಜ್ ಅನ್ನು ಮತ್ತು ಜಪ್ತಿಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸದರಿ ಟೆಟ್ರಾ ಪ್ಯಾಕುಗಳು ನಿಮ್ಮ ಇಲಾಖೆಗೆ ಸೇರಿದ್ದು ಅವುಗಳನ್ನು ಈ ಪ್ರಕರಣಕ್ಕೋಸ್ಕರ ಸೇರಿಸಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಹಜರನ್ನು ನೀವು ಸ್ಥಳದಲ್ಲೆ ಬರೆದಿರುವುದಿಲ್ಲ , ಠಾಣೆಯಲ್ಲಿ ಬರೆದು ಅದಕ್ಕೆ ಪಂಚರ

ಸಹಿಯನ್ನು ಸಹ ಠಾಣೆಯಲ್ಲೆ ಪಡೆದಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಅದೇ ರೀತಿ ನೀವು ಪಂಪಚರನ್ನು ಕರೆದಿರುವುದಿಲ್ಲ ಹಾಗೂ ಅಂಗಶೋಧನೆಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಹಾಜರು ಪಡಿಸಿರುವ ಎಲ್ಲಾ ದಾಖಲೆಗಳನ್ನು ಪ್ರಕರಣಕ್ಕೋಸ್ಕರ ನಿಮ್ಮ ಠಾಣೆಯಲ್ಲೆ ತಯಾರಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಹಾಜರು ಪಡಿಸಿರುವ ಟೆಟ್ರಾ ಪ್ಯಾಕುಗಳಿಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೀರಿ ಎಂದರೆ ಸಾಕ್ಷಿ ಸಂಬಂಧ ಇದೆ ಎಂದು ನುಡಿಯುತ್ತಾರೆ. ಸದರಿ ದಿನದಂದು ನಿಮ್ಮ ವಾಹನದ ಚಾಲಕರು ಯಾರು ಇದ್ದರು ಎಂದರೆ ಸಾಕ್ಷಿ ಸ್ವಾಮಿ ಎಂದು ಎಂದು ನುಡಿಯುತ್ತಾರೆ. ಸದರಿಯವರ ಸಹಿಯನ್ನು ಮಹಜರ್ ಗೆ ಪಡೆದಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ವಾಹನವು ಸದರಿ ದಿನದಂದು ಯಾವುದೇ ಗಸ್ತು ಮಾಡುತ್ತಿದ್ದಿರಲಿಲ್ಲ ಹಾಗೂ ವಾಹನವನ್ನು ಸ್ವಾಮಿಯವರು ಅಲ್ಲಿಗೆ ತಂದಿದ್ದಿರಲಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಎಲ್ಲಾ ಪಂಚರ ರುಜುಗಳನ್ನು ಕಛೇರಿಯಲ್ಲೆ ಪಡೆದಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಸ್ಥಳದಲ್ಲೆ ಪಡೆದಿರುತ್ತೇವೆ ಎಂದು ನುಡಿಯುತ್ತಾರೆ.

ಸದರಿ ಜಪ್ತಿ ಪಡಿಸಿಕೊಂಡು ನೋಟೀಸ್ ಅಂಟಿಸಿದ್ದ ಬಗ್ಗೆ ನೀವೇನಾದರು ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಯಾವುದೇ ಸಿಬ್ಬಂದಿಗಳು ಮಹಜರ್ ಅನ್ನು ಮಾಡಿರುವುದಿಲ್ಲ ಆ ಕಾರಣದಿದಲೇ ನಿಮ್ಮ ಸಹಿ ಇರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಜೊತೆ ಖಾಸಗಿ ಪಂಚರು ಸಹ ಇದ್ದಿರಲಿಲ್ಲ ಅವರ ಸಹಿಗಳನ್ನೂ ಸಹ ನೀವು ಠಾಣೆಯಲ್ಲೆ ಪಡೆದಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**

# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 6672 /2021

**ಚಾಸಾ ಃ- 04 / ಪ್ರಾಸಾ ಃ- 05**

| | |
|---|---|
| ಹೆಸರು | ರವಿಕಿರಣ್ ಎನ್ |
| ತಂದೆ ಹೆಸರು | ಪಿ ನಾಗರಾಜು |
| ವಯಸ್ಸು | 34 |
| ಉದ್ಯೋಗ | ಅಬಕಾರಿ ಪೇದೆ , ಸಿವಿಕಾನ್ ಹ್ಯಾಲಿ ವಲಯ |
| ವಿಳಾಸ | ಅಣೆದೊಡ್ಡಿ , ಹಾರೋಹಳ್ಳಿ ತಾಲ್ಲೂಕು |

**ದಿನಾಂಕಃ 06.09.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ದಿನಾಂಕ 14.12.2020 ರಿಂದ 2022ರ ವರೆಗೂ ಜಿಲ್ಲಾ ವಿಚಕ್ಷಣ ದಳ, ಅಬಕಾರಿ ಉಪ ಆಯುಕ್ತರ ಕಛೇರಿ, ರಾಮನಗರ ದಲ್ಲಿ ಅಬಕಾರಿ ಪೇದೆ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 26.12.2020 ರಂದು ಗ್ರಾಮಪಂಚಾಯ್ತಿ ಚುನಾವಣೆಯ ಪ್ರಯುಕ್ತ Dry day ಎಂದು ಘೋಷಿಸಿದ್ದ ಕಾರಣ ಮಾಗಡಿ ವಲಯದ ಆಗಲಕೋಟೆಹ್ಯಾಂಡ್ ಪೋಸ್ಟ್ ವ್ಯಾಪ್ತಿಯಲ್ಲಿ ಚಾಸಾ 1ರವರು ಹಾಗೂ ಸಿಬ್ಬಂದಿಗಳಾದ ನಾನು ಮತ್ತು ಮಾಗಡಿ ವಲಯದ ಸಿಬ್ಬಂದಿಗಳಾದ ಚಾಸಾ- 5 ಮತ್ತು ಚಾಸಾ 6 ರವರು ಚಾಸಾ 1 ರವರ ಜೊತೆಯಲ್ಲಿ ಸರ್ಕಾರಿ ವಾಹನ ಸಂಖ್ಯೆ ಕೆಎ 01-ಜಿ-5794 ರಲ್ಲಿ ಗಸ್ತು ನಡೆಸುತ್ತಿರುವಾಗ ಚಾಸಾ 1 ರವರಿಗೆ ಮಾಹಿತಿ ಬಂದ ಮೇರೆಗೆ ಆಗಲಕೋಟೆ ಹ್ಯಾಂಡ್ ಪೋಸ್ಟ್ ಬಳಿ ಇರುವ ಶಿವಾಜಿ ಮಿಲಿಟರಿ ಹೋಟೆಲ್ ನಲ್ಲಿ ಮದ್ಯವನ್ನು ಶೇಖರಣೆ ಮಾಡಿ ಗ್ರಾಹಕರಿಗೆ ಮಾರಾಟ ಮಾಡುತ್ತಿರುವ ಮಾಹಿತಿ ಬಂದಿತ್ತು. ನಂತರ ನಾವುಗಳು ಸದರಿ ಸ್ಥಳಕ್ಕೆ ತೆರಳಿ ಪಂಚರಾದ ಚಾಸಾ-2 ಮತ್ತು 3 ರವರಿಗೆ ನೋಟೀಸನ್ನು ಜಾರಿ ಮಾಡಿ ಬಂದ ವಿಷಯವನ್ನು ತಿಳಿಸಿ ನಮಗೆ ಪಂಚರಾಗಿ ಸಹಕರಿಸಬೇಕೆಂದು ಕೇಳಲಾಗಿ ಸದರಿ ಚಾಸಾ-2 ಮತ್ತು 3 ರವರು ಪಂಚರಾಗಿ ಬರಲು ಒಪ್ಪಿಕೊಂಡಿದ್ದರು. ನಂತರ

ಶಿವಾಜಿ ಮಿಲಿಟರಿ ಹೋಟೆಲ್ ಗೆ ತೆರಳಿ ನಮ್ಮ ಹಾಗೂ ಪಂಚರ ಅಂಗಶೋಧನೆ ಮಾಡಿಕೊಂಡು ಹೊಟೆಲ್ ಒಳಗೆ ಪ್ರವೇಶಿಸಿದಾಗ ಶಿವಾಜಿ ಹೋಟೆಲ್ ಪಶ್ಚಿಮಾಭಿಮುಖವಾಗಿ ಇರುತ್ತದೆ. ಹೊಟೆಲ್ ನ ಕ್ಯಾಶ್ ಕೌಂಟರ್ ನಲ್ಲಿ ಒಬ್ಬ ಆಸಮಿ ಕುಳಿತಿದ್ದು ಆತನನ್ನು ವಿಚಾರಿಸಲಾಗಿ ತನ್ನ ಹೆಸರು ಜನಾರ್ಧನ ರಾವ್ ಬಿನ್ ಬಾಬುರಾವ್ ಎಂದು ತಿಳಿಸಿರುತ್ತಾನೆ. ನಂತರ ಆತನಿಗೆ ಬಂದ ಮಾಹಿತಿಯನ್ನು ತಿಳಿಸಿದಾಗ ಆತನು ವಿಚಲಿತಗೊಂಡಿರುತ್ತಾನೆ. ನಂತರ ಸಮಯದ ಕಾಲಾವಕಾಶ ಇಲ್ಲದ ಕಾರಣ ಅಬಕಾರಿ ಕಾಯ್ದೆ ಕಲಂ 54ರ ಅಡಿಯಲ್ಲಿ ಶೋಧನಾ ಸಮುಚಿತ ವಾರೆಂಟ್ ಅನ್ನು ತಯಾರಿಸಿ ಪಂಚರ ಸಹಿಯನ್ನು ಪಡೆದುಕೊಂಡಿರುತ್ತೇವೆ. ಹೋಟೆಲ್ ನಲ್ಲಿ ಒಂದು ಡೈನಿಂಗ್ ಹಾಲ್ ಮತ್ತು ಅಡುಗೆ ಕೋಣೆ ಇರುತ್ತವೆ. ಹೋಟೆಲ್ ಹಿಂಭಾಗದಲ್ಲಿ ಒಂದು ಕೊಠಡಿ ಇದ್ದು ಕೊಠಡಿಯಲ್ಲಿ ಒಂದು ವಾಟರ್ ನ ಸಂಪ್ ಇರುತ್ತದೆ. ಅದನ್ನು ತೆಗೆದು ನೋಡಿದಾಗ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಇದ್ದದ್ದು ಕಂಡುಬಂದಿರುತ್ತದೆ. ಸದರಿ ಚೀಲವನ್ನು ಪಂಚರ ಸಮಕ್ಷಮ ತೆಗೆದು ನೋಡಲಾಗಿ ವಿವಿಧ ಮಾದರಿಯ ಮದ್ಯದ ಟೆಟ್ರಾ ಪ್ಯಾಕುಗಳು ಇರುವುದು ಕಂಡುಬಂದಿರುತ್ತದೆ. ಅದನ್ನು ಪರಿಶೀಲಿಸಿ ನೋಡಲಾಗಿ 180 ಎಂ ಎಲ್ ನ 17 ಬ್ಯಾಗ್ ಪೆಪರ್ ವಿಸ್ಕಿಯ ಟೆಟ್ರಾ ಪ್ಯಾಕಗಳು, 180 ಎಂ ಎಲ್ ನ 21 ಓಲ್ಡ್ ಟಾವರಿನ್ ವಿಸ್ಕಿಯ ಟೆಟ್ರಾ ಪ್ಯಾಕುಗಳು ಮತ್ತು 90 ಎಂ ಎಲ್ ನ 17 ಓಸಿ ವಿಸ್ಕಿಯ ಟೆಟ್ರಾ ಪಾಕುಗಳು ಹೀಗೆ ಒಟ್ಟು 8.370 ಲೀಟರ್ ಮದ್ಯ ಇರುವುದು ಕಂಡು ಬಂದಿರುತ್ತದೆ. ಸದರಿ ಮದ್ಯದ ಟೆಟ್ರಾ ಪ್ಯಾಕಗಳನ್ನು ಹೊಂದಲು ಪರವಾನಗಿ ಇದೆಯೆ ಎಂದು ಸದರಿ ವ್ಯಕ್ತಿಗೆ ಕೇಳಲಾಗಿ ಆತನು ಯಾವುದೇ ಪರವಾನಗಿ ಇರುವುದಿಲ್ಲವೆಂದು ತಿಳಿಸಿರುತ್ತಾನೆ. ಇದು ಒಬ್ಬ ವ್ಯಕ್ತಿಯು ಗರಿಷ್ಟ ಮಟ್ಟಕ್ಕಿಂತ ಜಾಸ್ತಿ ಪರವಾನಗಿ ಇಲ್ಲದೆ ಇಟ್ಟಿರುವುದು ಅಬಕಾರಿ ಕಾಯ್ದೆಯ ಪ್ರಕಾರ ಅಪರಾಧವೆಂದು ತಿಳಿಸಿರುತ್ತೇವೆ. ಸದರಿ ಮದ್ಯಗಳನ್ನು ಯಾವ ಕಾರಣಕ್ಕಾಗಿ ಇಟ್ಟುಕೊಂಡಿರುತ್ತೀರಿ ಎಂದು ಕೇಳಲಾಗಿ ಆತನು ಹೆಚ್ಚಿನ ಹಣವನ್ನು ಗಳಿಸುವ ಉದ್ದೇಶಕ್ಕಾಗಿ ಇಟ್ಟುಕೊಂಡಿರುತ್ತೇನೆ ಎಂದು ತಿಳಿಸಿರುತ್ತಾನೆ. ನಂತರ ಜಪ್ತು ಪಡಿಸಿದ ಮದ್ಯಗಳಿಂದ ತಲಾ 10 ಟೆಟ್ರಾ ಪ್ಯಾಕುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆಯಲಾಯಿತು. ಅದನ್ನು ಬಿಳಿಯ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ

21ಬಿ ಎಂಬ  ಅಬಕಾರಿ ಸೀಲ್ ನಿಂದ  ಮೊಹರು ಮಾಡಲಾಯಿತು. ನಂತರ ಮಾದರಿ ಚೀಟಿಯನ್ನು ತಯಾರಿಸಿ ಅದಕ್ಕೆ ಅಂಟಿಸಲಾಯಿತು. ನಂತರ ಮಾದರಿ  ಸೀಲಿನ ನಕಲನ್ನು ತಯಾರಿಸಿ  ಪಂಚರ ಸಹಿ  ಪಡೆಯಲಾಯಿತು.  ನಂತರ ಆರೋಪಿಯನ್ನು ಸ್ಥಳದಲ್ಲಿ ದಸ್ತಗಿರಿ ಮಾಡಿ  ಕಛೇರಿಗೆ ತರಲಾಯಿತು.  ನಂತರ ಮುದ್ದೆಮಾಲು ಹಾಗೂ ಆರೋಪಿಯನ್ನು ಅಬಕಾರಿ ಕಛೇರಿಗೆ ತೆರಳಿ ಮೊಕದ್ದಮೆ ದಾಖಲಿಸಲಾಗಿ ಪಂಚರಿಗೆ ತಿಳಿಸಲಾಯಿತು. ಮಹಜರ್ ಕ್ರಮವನ್ನು ಮಧ್ಯಾಹ್ನ 1.00 ರಿಂದ 2.30 ಗಂಟೆವರೆಗೆ ಜರುಗಿಸಲಾಯಿತು.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ಹಂತದಲ್ಲಿ ಆರೋಪಿ ಪರ ವಕೀಲರಿಂದ ಆರೋಪಿಯ ಗುರುತಿಸುವಿಕೆಗೆ ಯಾವುದೇ ತಕರಾರು ಇರುವುದಿಲ್ಲ.

ಈಗ ಸಾಕ್ಷಿಗೆ ನಿಪಿ-01 ನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ  ಸಾಕ್ಷಿಯ ಸಹಿಯನ್ನು  ನಿಪಿ-1(ಇ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ಮಹಜರ್ ಗೆ ನನ್ನ ಜೊತೆ ಚಾಸಾ 1 ರಿಂದ 3, 5 ಮತ್ತು 6 ರವರು ಸಹಿ ಮಾಡಿರುತ್ತಾರೆ.

ಈಗ ಸಾಕ್ಷಿಗೆ ಮುದ್ದೆಮಾಲು  1 ರಿಂದ  3  ಅನ್ನು ತೋರಿಸಲಾಗಿ ಸದರಿ ಜಪ್ತಿ ಪಡಿಸಿಕೊಂಡ ಟೆಟ್ರಾ ಪ್ಯಾಕುಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲು ಃ ಆರೋಪಿ ಪರ ಶ್ರೀ ಆರ್ ಎಸ್  ವಕೀಲರಿಂದಃ**

ಶಿವಾಜಿ  ಮಿಲ್ಟ್ರಿ ಹೋಟೆಲ್ ಯಾರ ಮಾಲೀಕತ್ವಕ್ಕೆ ಸೇರಿರುತ್ತದೆ ಎಂದು ನೀವು ದಾಖಲೆ ನೋಡಿರುತ್ತೀರಾ ಎಂದರೆ  ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಸದರಿ ಹೋಟೆಲ್ ಗೆ ದಾಳಿ ಮಾಡಿದಾಗ ಯಾರಾದರೂ ಗ್ರಾಹಕರು ಹೋಟೆಲ್ ನಲ್ಲಿ ಮದ್ಯ ಸೇವನೆ ಮಾಡುತ್ತಿದ್ದರ ಎಂದರೆ ಸಾಕ್ಷಿ  ಇಲ್ಲ  ಎಂದು ನುಡಿಯುತ್ತಾರೆ. ಪಂಚದಾರರಿಗೆ ನೋಟೀಸನ್ನು  ಎಲ್ಲಿ  ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ  ಹೋಟೆಲ್ ಹತ್ತಿರ  ಎಂದು ನುಡಿಯುತ್ತಾರೆ. ಆರೋಪಿ  ಹಾಗೂ ಸದರಿ  ಶಿವಾಜಿ ಮಿಲ್ಟ್ರಿ ಹೋಟೆಲ್ ನ ಮಾಲೀಕರಿಗೆ ಏನು ಸಂಬಂಧ ಎಂದು ನೀವು ದಾಖಲೆ ಪರಿಶೀಲಿಸಿರುತ್ತೀರಾ ಎಂದರೆ ಸಾಕ್ಷಿ  ಇಲ್ಲ ಎಂದು ನುಡಿಯುತ್ತಾರೆ. ಮಹಜರ್ ನಲ್ಲಿ ಹೋಟೆಲ್ ನಂಬರ್, ವಿಸ್ತೀರ್ಣ ಮತ್ತು

ಕೋಣೆಗಳ ಬಗ್ಗೆ ಬರೆದಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ನಿಮ್ಮ ಸಮಕ್ಷಮ ಅಮಾನತು ಪಡಿಸಿಕೊಂಡಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಪ್ಲಾಸ್ಟಿಕ್ ಚೀಲ ನ್ಯಾಯಾಲಯದ ಮುಂದೆ ಇದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಜಪ್ತಿ ಪಡಿಸಿಕೊಂಡ ಮದ್ಯದ ಟೆಟ್ರಾ ಪ್ಯಾಕುಗಳನ್ನು ಎಲ್ಲಿಂದ ತಂದಿರುತ್ತಾರೆ ಎಂದು ಬರವಣಿಗೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಟೆಟ್ರಾ ಪ್ಯಾಕುಗಳ ಬ್ಯಾಚ್ ನಂಬರ್ ಮತ್ತು ಟೆಟ್ರಾ ಪ್ಯಾಕುಗಳ ಮೇಲೆ ಇರುವ ಇತರ ವಿವರಗಳನ್ನು ಮಹಜರ್ ನಲ್ಲಿ ನಮೂದಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಲೇಬಲ್ ನಂಬರ್ ಅನ್ನು ನಾಶಪಡಿಸಿರುತ್ತಾರೆ ಎಂದು ಮಹಜರ್ ನಲ್ಲಿ ನಮೂದಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಗ್ರಾಮಪಂಚಾಯ್ತಿ ಚುನಾವಣೆ ಇದ್ದಿದ್ದರಿಂದ ನಿಮ್ಮ ಇಲಾಖೆಯ ಅಂಕಿಅಂಶಕ್ಕೋಸ್ಕರ ನೀವು ಯಾವುದೇ ದಾಳಿಯನ್ನು ಮಾಡದೆ ಹಾಗೂ ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಳ್ಳದೆ ಠಾಣೆಯಲ್ಲೆ ಎಲ್ಲಾ ಸೃಷ್ಟಿಸಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಶಿವಾಜಿ ಹೋಟೆಲ್ ಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಹಾಗೂ ಆರೋಪಿಯು ಸದರಿ ಹೋಟೆಲ್ ನಲ್ಲಿ ಇದ್ದಿರಲಿಲ್ಲ ಎಂದರೆ ಸಾಕ್ಷಿ ಇದ್ದರು ಎಂದು ನುಡಿಯುತ್ತಾರೆ. ಸದರಿ ಹೋಟೆಲ್ ನ ಅಕ್ಕ ಪಕ್ಕ ಮನೆಗಳು ಮತ್ತು ಅಂಗಡಿಗಳು ಇವೆಯೆ ಎಂದರೆ ಸಾಕ್ಷಿ ಇದೆ ಎಂದು ನುಡಿಯುತ್ತಾರೆ. ನೀವು ದಾಳಿ ಮಾಡಿದ ಸಮಯದಲ್ಲಿ ಅಂಗಡಿಗಳು ಓಪನ್ ಇತ್ತೆ ಎಂದರೆ ಸಾಕ್ಷಿ ಓಪನ್ ಇತ್ತು ಎಂದು ನುಡಿಯುತ್ತಾರೆ. ಸದರಿ ಅಕ್ಕಪಕ್ಕ ಅಂಗಡಿಯವರನ್ನು ಮಹಜರ್ ಮಾಡುವ ಸಮಯದಲ್ಲಿ ಕರೆದಿದ್ದಿರ ಎಂದರೆ ಸಾಕ್ಷಿ ಭಾಗವಹಿಸಿರುತ್ತಾರೆ ಆದರೆ ಮಹಜರ್ ಗೆ ಸಹಿ ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಯಾವುದೇ ದಾಳಿ ಮಾಡಿರುವುದಿಲ್ಲ ಹಾಗೂ ಯಾವುದೇ ಅಬಕಾರಿ ಸೀಜ್ ಅನ್ನು ಮತ್ತು ಜಪ್ತಿಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸದರಿ ಟೆಟ್ರಾ ಪ್ಯಾಕುಗಳು ನಿಮ್ಮ ಇಲಾಖೆಗೆ ಸೇರಿದ್ದು ಅವುಗಳನ್ನು ಈ ಪ್ರಕರಣಕ್ಕೋಸ್ಕರ ಸೇರಿಸಿರುತ್ತೀರಿ ಎಂದರೆ ಸಾಕ್ಷಿ

ಇಲ್ಲ ಎಂದು ನುಡಿಯುತ್ತಾರೆ. ಮಹಜರನ್ನು ನೀವು ಸ್ಥಳದಲ್ಲೆ ಬರೆದಿರುವುದಿಲ್ಲ , ಠಾಣೆಯಲ್ಲಿ ಬರೆದು ಅದಕ್ಕೆ ಪಂಚರ ಸಹಿಯನ್ನು ಸಹ ಠಾಣೆಯಲ್ಲೆ ಪಡೆದಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಅದೇ ರೀತಿ ನೀವು ಪಂಪಚರನ್ನು ಕರೆದಿರುವುದಿಲ್ಲ ಹಾಗೂ ಅಂಗಶೋಧನೆಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಹಾಜರು ಪಡಿಸಿರುವ ಎಲ್ಲಾ ದಾಖಲೆಗಳನ್ನು ಪ್ರಕರಣಕ್ಕೋಸ್ಕರ ನಿಮ್ಮ ಠಾಣೆಯಲ್ಲೆ ತಯಾರಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಹಾಜರು ಪಡಿಸಿರುವ ಟೆಟ್ರಾ ಪ್ಯಾಕುಗಳಿಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಿನದಂದು ನಿಮ್ಮ ವಾಹನದ ಚಾಲಕರು ಯಾರು ಇದ್ದರು ಎಂದರೆ ಸಾಕ್ಷಿ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿಯವರ ಸಹಿಯನ್ನು ಮಹಜರ್ ಗೆ ಪಡೆದಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ವಾಹನವು ಸದರಿ ದಿನದಂದು ಯಾವುದೇ ಗಸ್ತು ಮಾಡುತ್ತಿದ್ದಿರಲಿಲ್ಲ ಹಾಗೂ ವಾಹನವನ್ನು ಅಲ್ಲಿಗೆ ತಂದಿದ್ದಿರಲಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಎಲ್ಲಾ ಪಂಚರ ರುಜುಗಳನ್ನು ಕಛೇರಿಯಲ್ಲೆ ಪಡೆದಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಸ್ದಳದಲ್ಲೆ ಪಡೆದಿರುತ್ತೇವೆ ಎಂದು ನುಡಿಯುತ್ತಾರೆ.

ಸದರಿ ಜಪ್ತಿ ಪಡಿಸಿಕೊಂಡು ನೋಟೀಸ್ ಅಂಟಿಸಿದ್ದ ಬಗ್ಗೆ ನೀವೇನಾದರು ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಯಾವುದೇ ಸಿಬ್ಬಂದಿಗಳು ಮಹಜರ್ ಅನ್ನು ಮಾಡಿರುವುದಿಲ್ಲ ಆ ಕಾರಣದಿದಲೇ ನಿಮ್ಮ ಸಹಿ ಇರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಜೊತೆ ಖಾಸಗಿ ಪಂಚರು ಸಹ ಇದ್ದಿರಲಿಲ್ಲ ಅವರ ಸಹಿಗಳನ್ನೂ ಸಹ ನೀವು ಠಾಣೆಯಲ್ಲೆ ಪಡೆದಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ . ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**